



ದ್ರಾಕ್ಷಾಶಿಲ್ಪ



ಸಾರಿಕೊಂಡಿರುತ್ತವೆ. ಅದರಲ್ಲೂ ವೈನುಗಳ ಕುಪ್ಪಿಗಳ ಮೇಲೆ ದ್ರಾಕ್ಷಿಯ ಚಿತ್ರಗಳು ಸಾಮಾನ್ಯ. ಯೂರೋಪಿನ ಚಿತ್ರಕಲೆ ಶಿಲ್ಪಗಳಲ್ಲೂ ದ್ರಾಕ್ಷಿ ಬೆಳೆವ, ದ್ರಾಕ್ಷಿ ಕೀಳುವ, ವೈನುಮಾಡುವ, ಮಕ್ಕಳು ಕುಡಿಯುವ ದೃಶ್ಯಗಳಿವೆ. ವೈನುಸೇವನೆ ಕ್ರೈಸ್ತರ ಧಾರ್ಮಿಕಾಚರಣೆಯ ಭಾಗವೂ ತಾನೇ? ನಮ್ಮಲ್ಲಿ ಉಪ್ಪಿನಕಾಯಿ ಹಾಕಿಕೊಳ್ಳುವಂತೆ ಅಲ್ಲಿ ಮನೆಗಳಲ್ಲಿ ವೈನು ಮಾಡಿಕೊಳ್ಳುವಂತೆ ಕಾಣುತ್ತದೆ. ನಮ್ಮ ಗೈಡ್‌ಗಳು ಹೇಳುತ್ತಿದ್ದರು: 'ನೀರಿನ ಬದಲು ಅಗ್ಗವಾಗಿರುವ ನಮ್ಮ ದೇಶದ ಶ್ರೇಷ್ಠ ಬೀರು–ವೈನು ಕುಡಿಯಿರಿ'. ನಾವು ಅವರ ಅಮೂಲ್ಯ ಸಲಹೆಯನ್ನು ಶಿರಸಾವಹಿಸಿ ಪಾಲಿಸಿದೆವು. ಹಿತವಾದ ಒಗರುತನದ ಬೀರು. ಅದರಲ್ಲೂ ಮ್ಯೂನಿಕ್ಕಿನ ಬೀರ್‌ಪಾರ್ಕಿನಲ್ಲಿ ಸೇವಿಸಿದ ಬೀರು, ಆಗಷ್ಟೆ ಕರೆದ ಹಾಲಿನಂತೆ ತಾಜಾ ಆಗಿತ್ತು.

ಯೂರೋಪಿನಲ್ಲಿ ಯಥೇಚ್ಛ ಹಣ್ಣು ಬೆಳೆಯುತ್ತಾರೆ ಮತ್ತು ತಿನ್ನುತ್ತಾರೆ. ಹಣ್ಣುಗಳ ಉತ್ಪತ್ತಿಗೂ ಮದ್ಯಕ್ಕೂ ಸಂಬಂಧವಿದೆ. ಹವಾಮಾನವೂ ದ್ರಾಕ್ಷಿಬೆಳೆಗೆ ಪೂರಕವಾಗಿದೆ. ಬಹುತೇಕ ಮನೆಗಳಲ್ಲಿ ಹೂವು, ಸೇಬು, ಚೆರ್ರಿ, ಕಿತ್ತಲೆ, ಆಲಿವ್ ಗಿಡಗಳೂ, ಹಳೆಯ ಕಾಂಡವುಳ್ಳ ದ್ರಾಕ್ಷಿ ಬಳ್ಳಿಗಳೂ ಇವೆ. ಕ್ರೊಏಶಿಯಾ ದೇಶದ ಪ್ಲೋಚೆ – ನದೀ ಕಣಿವೆಯಲ್ಲಿದ್ದ ಪಟ್ಟಣ – ಹಣ್ಣಿನ ತೋಟಗಳಿಂದ ನಂದನವನವಾಗಿತ್ತು. ರಸ್ತೆಯುದ್ದಕ್ಕೂ ಹಣ್ಣಿನಂಗಡಿ. ನಗರಸಭೆಯವರು ಸಾಲುಮರಗಳಾಗಿ ಹಣ್ಣಿನ ಮರಗಳನ್ನೇ ನೆಡುವುದುಂಟು. ಮ್ಯೂನಿಕ್ಕಿನಲ್ಲಿ ಸೇಬಿನ ಸಾಲುಗಿಡಗಳಿದ್ದವು. ರೋಮಿನ ಸಾಲುಮರಗಳಲ್ಲಿ ಸಿಹಿಕಿತ್ತಲೆ ಜಗ್ಗಿದ್ದವು. ಸೀಜನ್ನಿನಲ್ಲಿ ಹಣ್ಣು ತಿನ್ನುವರಿಲ್ಲದೆ ಬಿದ್ದು ಹೋಗುತ್ತವೆಯಂತೆ. ಹಕ್ಕಿಗಳ ಅದೃಷ್ಟ. ನಾವು ನಮ್ಮಲ್ಲಿರುವ ಕಲ್ಲಂಗಡಿ, ಮೋಸಂಬಿ, ಕಿತ್ತಲೆಗಳನ್ನು ಬಿಟ್ಟು, ರಗುತಗೆಂಪಿನ ಚೆರ್ರಿ, ಕೈಮಾ ಉಂಡೆಯಂತಿದ್ದ ಸ್ಟ್ರಾಬೆರ್ರಿಗಳನ್ನು ಥಂಡಿಯಾಗಿ ತಿಂದೆವು. ಆತಿಥೇಯ ದೀಪು ಫಲಪ್ರಿಯರಾಗಿದ್ದು, ರಾತ್ರಿಯೂಟದ ಬದಲಿಗೆ ಹಣ್ಣು ಸೇವಿಸುತ್ತಿದ್ದರಿಂದ, ಮ್ಯೂನಿಕ್ಕಿನ ಮನೆಯೂ ಹಣ್ಣಿನಂಗಡಿಯಾಗಿತ್ತು. ಯೂರೋಪಿನಲ್ಲಿ ಬಾಳೆ ಮತ್ತು ಮಾವು, ಪಾಪ ಯಾವ ದೇಶದಿಂದ ಪಯಣಿಸಿ ಬರುತ್ತವೆಯೊ, ಪರಿಮಳ–ರುಚಿ ಎರಡೂ ಕಾಣೆಯಾಗಿದ್ದವು. ಎಳನೀರು ಮೈಕೆತ್ತಿಸಿಕೊಂಡು ಪ್ಯಾಕಾಗಿ ಬಾಂಬಿನಂತೆ ಕುಳಿತಿರುತ್ತದೆ. ಆದರೆ ಸೇಬು, ದ್ರಾಕ್ಷಿಗಳಲ್ಲಿ ಹತ್ತಾರು ಜಾತಿ. ರೋಮಿನಲ್ಲಿ ನಾವು ಹಣ್ಣಿನ ಖರೀದಿಗೆ ರೈಲು–ಬಸ್ಸು ನಿಲ್ದಾಣ ಇರುವ ರೋಮಾ ಟರ್ಮಿನಿಯ ಮಾಲಿಗೆ ಹೋಗುತ್ತಿದ್ದೆವು. ಅಲ್ಲಿ ವಿಶಾಲವಾದ ಹಣ್ಣಿನ ಮಾಲಿತ್ತು. ಬೆಲೆಯೂ ಸೋವಿ.

ಜರ್ಮನಿಯ ನೀಳಕಾಯದ ನೆಣವಿಲ್ಲದೆ ಹುರಿಗಟ್ಟಿದ ದೇಹದ ಮಂದಿ ಬಿಲ್ಲಿನಂತೆ ಬಳುಕುತ್ತಿರುತ್ತಾರೆ. ಸ್ಲಿಮ್‌ಫಿಟ್ ಅಂಗಿಯಲ್ಲಿ ಅಡಗಿರುವ ಅವರ ಮೈಕಟ್ಟು ಆರೋಗ್ಯವನ್ನು ಕಾಣಿಸುತ್ತದೆ. ಇದಕ್ಕೆ ಕಾರಣ ಅವರ ಆಹಾರಕ್ರಮ ಮತ್ತು ಕ್ರೀಡಾಸಕ್ತಿ. ಎಷ್ಟೊಂದು ಹಸಿತರಕಾರಿ ಹಣ್ಣುಸೇವನೆ ಮಾಡುತ್ತಾರೆ! ಮಧ್ಯ ಏಶಿಯಾದ ಜೋರ್ಡಾನ್, ಈಜಿಪ್ತ್, ಪ್ಯಾಲಸ್ತೇನ್, ಟರ್ಕಿಗಳಲ್ಲೂ ಇದನ್ನು ನಾವು ಕಂಡಿದ್ದೆವು. ಮ್ಯೂನಿಕಿನಲ್ಲಿ ವಾಕಿಂಗ್ ಹೋಗುವಾಗ ಫುಟ್‌ಬಾಲ್ ಕ್ಲಬ್ಬುಗಳಿದ್ದ ರಸ್ತೆಯಲ್ಲಿ ಜನ ತುಂತುರು ಮಳೆಯಲ್ಲೂ ಆಡುವುದನ್ನು ನೋಡಿದೆವು. ಸಣ್ಣಸಣ್ಣ ಊರಲ್ಲೂ ಕ್ರೀಡಾಂಗಣಗಳು. ಅದರೊಳಗೆ ಹಕ್ಕಿಗಳಂತೆ ಆಡುವ ಮಕ್ಕಳು. ಕಷ್ಟಪಟ್ಟು ದುಡಿಯುವುದು, ಚೆನ್ನಾಗಿ ಉಣ್ಣುವುದು, ರಜೆಯಲ್ಲಿ ಮೈಮರೆತು ಮೋಜು, ವ್ಯಾಯಾಮದಿಂದ ದೃಢತೆ ಕಾಪಾಡಿಕೊಳ್ಳುವುದು – ಇವರ ಜೀವನಕ್ರಮದಲ್ಲೇ ಸೇರಿಹೋಗಿದೆ. ಜೀವನಸುಖದ ವಿಷಯದಲ್ಲಿ ನಾವು ಬರೀ ಸಿದ್ಧಾಂತಿಗಳು ಅನಿಸಿತು. ಹೋದ ದೇಶದಲ್ಲೆಲ್ಲ ಮನೆಯೂಟವನ್ನೇ ಬಯಸುವುದೊಂದು ಗೀಳು. ಸಿಕ್ಕ ಆಹಾರ ತಿಂದು ದಕ್ಕಿಸಿಕೊಳ್ಳುವ ಅಭ್ಯಾಸವಿಲ್ಲದೆ ಹೋದರೆ ಪ್ರವಾಸ ಸಾಧ್ಯವಿಲ್ಲ. ಆಹಾರಪ್ರಿಯ ಭಾರತೀಯರು, ಅದರಲ್ಲೂ ಹಿರಿಯರು ಹೊಸ ಆಹಾರಕ್ಕೆ ತೆರೆದುಕೊಳ್ಳುವುದಿಲ್ಲ. ಬೇಗನೇ ಹೊಂದಿಕೊಳ್ಳುವುದಿಲ್ಲ. ಆದರೆ ಕೆಲಸಕ್ಕೆ ಓದಿಗೆ ಹೋಗಿರುವ ಹೊಸತಲೆಮಾರು ಹೀಗಲ್ಲ. ಯಾವ ನಾಡಲ್ಲೂ ಬೇರುಬಿಡದೆ ಅಲೆಯಬಲ್ಲ ಅದಕ್ಕೆ ನೆಲಸಿಕ್ಕಕಡೆ ಚಿಗುರುವ ಗುಣವಿದೆ. ಇದೊಂದು ಮಾರುಕಟ್ಟೆ ಸಂಸ್ಕೃತಿಯ ವಿಶ್ವಾತ್ಮಕತೆ. ಆಮಸ್ಟರ್‌ಡ್ಯಾಮಿನಿಂದ ದೆಹಲಿಗೆ ಬರುತ್ತ 12 ತಾಸಿನ ಪಯಣದಲ್ಲಿ, ನನ್ನ ಪಕ್ಕ ಕೋಲ್ಕತ್ತೆಯ ವಿದ್ಯಾರ್ಥಿನಿ ಕೂತಿದ್ದಳು. ಫೆಲೊಶಿಪ್ ಪಡೆದು ಕೊಲಂಬಿಯಾದಲ್ಲಿ ಟ್ಯಾಗೂರ್ ಹಾಗೂ ಮಾರ್ಕ್ವೆಜ್ ಕಾದಂಬರಿಗಳ ಮೇಲೆ ಸಂಶೋಧನೆ ಮಾಡುತ್ತಿದ್ದ ಆಕೆ, ಗಗನಸಖಿಯರಿಂದ ಎಲ್ಲ ಬಗೆಯ ಆಹಾರ–ಪಾನೀಯಗಳನ್ನು ವಸೂಲಿ ಮಾಡಿ ಸವಿದಳು. ಭಪ್ಪರೆ ಎಂದೆ.

ನಾವು ತಾನೇ 'ರೋಮಿನಲ್ಲಿದ್ದಾಗ ರೋಮನನಂತಿರು' ಗಾದೆಯನ್ನು ಆದಷ್ಟೂ ಪಾಲಿಸಿದೆವು. ಆದರೂ ಇಪ್ಪತ್ತು ದಿನ ಕಳೆದ ಬಳಿಕ ನಾಲಗೆ ಕೆಡಲಾರಂಭಿಸುತ್ತದೆ. ಮನೆಯೂಟ ಕಾಡಲಾರಂಭಿಸುತ್ತದೆ. ನಮಗೆ ಮನೆಯಿದ್ದ ಕಾರಣ ಹೆಚ್ಚು ಕಷ್ಟವಾಗಲಿಲ್ಲ. ಜರ್ಮನಿ ಬಿಡುವಾಗ ನೋಡಿದೆವು. ಜತನದಿಂದ ಗೌರಿ–ದೀಪುಗೆಂದು ಒಯ್ದಿದ್ದ ದಿನಿಸಿ–ತಿಂಡಿಯನ್ನೆಲ್ಲ ನಾವೇ ಖಾಲಿಮಾಡಿದ್ದೆವು. ಬೆಂಗಳೂರಿಗೆ ಬಂದು ಇಳಿದೊಡನೆ ಏರ್‌ಪೋರ್ಟಿನಲ್ಲಿರುವ 'ಹಟ್ಟಿಕಾಫಿ'ಗೆ ನುಗ್ಗಿದೆವು. ಜನ ದೇಶಬಿಟ್ಟು ಹೋಗುವ ಮತ್ತು ದೇಶಕ್ಕೆ ಮರಳುವ ಈ ಅಂತರರಾಷ್ಟ್ರೀಯ ಸ್ಥಳದಲ್ಲೇ ದೇಶೀ ಹೆಸರಿನ ಅಂಗಡಿಗಳಿವೆ! ಭಾರತೀಯ ನಾಲಗೆ ದೌರ್ಬಲ್ಯ ಅರಿತವರಂತೆ ನಾವು ಚಪ್ಪರಿಸಿ ಕಾಫಿ ಕುಡಿಯುವುದನ್ನೇ ಹಟ್ಟಿಕಾಫಿಯ ಹುಡುಗರು ಹುಸಿನಗೆಯಿಂದ ಗಮನಿಸುತ್ತಿದ್ದರು. ■